ಹೇಳಿದ್ದೇವೆ. ಇದರ ಬಗ್ಗೆ ಚರ್ಚೆ ನಡೆಯುವುದು ಒಳ್ಳೆಯದು. ಈ ವಿಚಾರದಲ್ಲಿ ಲೇಬರ್ ಮಿನಿಸ್ಟರ್‌ದ್ದು ೨-೩ ಮೀಟಿಂಗ್ ಆಗಿದೆ. ಮತ್ತೆ ಮೀಟಿಂಗ್ ನಡೆಯಬೇಕಾಗಿದೆ. ಆಗ ಇದರ ಬಗ್ಗೆ ಏನಾದರೂ ಒಂದು ನಿರ್ಣಯಕ್ಕೆ ಬಂದರೆ ಕಾರ್ಮಿಕರಿಗೆ ಅನುಕೂಲವಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಬೀಡಿ ಮಾಲೀಕರು ಇದರಿಂದ ಲಾಭ ಮಾಡುವಾಗ ಇದರಲ್ಲೇ ಜೀವನ ಮಾಡತಕ್ಕಂಥ ಕಾರ್ಮಿಕರಿಗೆ ಅವರು ಕೊಡತಕ್ಕಂಥಾದ್ದು ಬಹಳ ಕಡಿಮೆ ಎಂದು ಹೇಳುತ್ತೇನೆ. ಅನೇಕ ಮುಗ್ಧರನ್ನು ಅವರ ಕೈಯಲ್ಲಿ ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಕೇರಳದಲ್ಲಿ ೧೫ ರೂಪಾಯಿಗಳಂ ಇರುವಾಗ ಕರ್ನಾಟಕದಲ್ಲಿ ಅತಿ ಕಡಿಮೆ ಇರುವುದು ಸರಿಯಲ್ಲ. ಆದರಂತೆ ಇಲ್ಲೂ ಕೂಡ ಅವರಿಗೆ ಹೆಚ್ಚು ಕೊಟ್ಟರೆ ಸಂತೋಷ. ಕೇರಳದಲ್ಲಿರುವ ಹಾಗೆ ಆ ರೀತಿಯಾಗಿ ಈ ಬೀಡಿ ಕಾರ್ಮಿಕರಿಗೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಒಂದೇ ದೃಷ್ಟಿ, ಇಟ್ಟು ಕೊಂಡು ಕಾನೂನು ಮಾಡುವುದಕ್ಕಾಗುವುದಿಲ್ಲ, ಹುಬ್ಬಳ್ಳಿ, ನಿಪ್ಪಾಣಿ, ಹರಿಹರ, ಕೋಲಾರ ಈ ಭಾಗದಲ್ಲೂ ಇದ್ದಾರೆ. ಅಕ್ಕಪಕ್ಕದ ರಾಜ್ಯಗಳಲ್ಲಿರತಕ್ಕಂಥಾದ್ದನ್ನೂ ಗಮನಿಸಬೇಕು. ತಾವು ಹೇಳಿದ ಹಾಗೆ ಕೇರಳದಲ್ಲಿ ಸಹಕಾರ ಸಂಘಗಳ ಮುಖಾಂತರ ಇದು ನಡೆಯುವುದರಿಂದ ಇಲ್ಲೂ ಕಡೆ ಸಹಕಾರ ಸಂಘಗಳ ಮುಖಾಂತರ ಮಾಡುತ್ತೇವೆಂದು ಈ ಬೀಡಿ ಕಾರ್ಮಿಕರು ಏನಾದರೂ ಮುಂದೆ ಬಂದರೆ ಅವರಿಗೆ ಸರ್ಕಾರಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಬಿ.ಎಂ. ಇದಿನಬ್ಬ.—ಸ್ವಾಮಿ, ಈ ಒಂದು ಉದ್ದಿಮೆಯಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫ ಲಕ್ಷ ಜನ ಬೀಡಿ ಕಾರ್ಮಿಕರು ಜೀವನ ಮಾಡುತ್ತಿದ್ದಾರೆ. ಈ ಮಾಲೀಕರು ಆ ಕಾರ್ಮಿಕರಿಗೆ ಕೊಡುವ ಕೂಲಿ ಕಡಿಮೆ ಇದೆ. ಆ ಮಾಲೀಕರು ಚೆನ್ನಾಗಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ಅವರು ಕೋಟ್ಯಾಂತರ ರೂಪಾಯಿಗಳ ಇನ್‌ಕಂಟ್ಯಾಕ್ಸ್ ಕಟ್ಟುತ್ತಿದ್ದಾರೆ. ಆದುದರಿಂದ ತಾವು ಇದರ ಬಗ್ಗೆ ತತ್‌ಕ್ಷಣ ಜಾಗ್ರತೆ ವಹಿಸಿ ಕೆಲಸ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ನಾನು ಮೊನ್ನೆಯ ದಿವಸ ಮಾನ್ಯ ಮಂಜುನಾಥ್‌ರವರ ಹತ್ತಿರ ಹೋಗಿದ್ದೆ. ಅವರ ಹತ್ತಿರ ಈ ವಿಚಾರದಲ್ಲಿ ಮಾತನಾಡಿದೆ. ಅವರು ಇದಕ್ಕೆ ಒಪ್ಪಿಕೊಂಡಿದ್ದಾರೆ. ತಾವು ಸಹ ಈ ವಿಚಾರದಲ್ಲಿ ಆ ಮಾಲೀಕರನ್ನು ಸ್ವಲ್ಪ ಬಿಗಿಗೊಳಿಸಿದರೆ ಅವರೂ ಮಾಡಬಹುದು. ಇದರಿಂದ ೫ ಲಕ್ಷ ಜನ ಬೀಡಿ ಕಾರ್ಮಿಕರಿಗೆ ಸಹಾಯವಾಗುತ್ತದೆ, ಆ ಬಡವರಿಗೆ ಅನುಕೂಲವಾಗುತ್ತದೆ ? ಹಾಗೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದುದನ್ನು ಪರಿಶೀಲನೆ ಮಾಡುತ್ತೇನೆ. ಅವರನ್ನು ಕರೆಯಿಸುತ್ತೇನೆ.

ಬರಪೀಡಿತ ಪ್ರದೇಶಗಳಿಗಾಗಿ ಮೇವು ಸಂಗ್ರಹಣೆ

೭೩ (೩೬೭) ಶ್ರೀ ಬಿ. ಸ್ವಾಮಿರಾವ್ (ಹೊಸ ನಗರ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಬರಪೀಡಿತ ಪ್ರದೇಶಕ್ಕಾಗಿ ಹೊಸನಗರ ತಾಲ್ಲೂಕಿನಲ್ಲಿ ಸಂಗ್ರಹಿಸಿದ ಮೇವಿನ ಪ್ರಮಾಣವೆಷ್ಟು ?

ಆ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಇ) ಶೇಖರಿಸಿದ ಮೇವನ್ನು ಎಲ್ಲಿಗೆ ಕಳುಹಿಸಲಾಗಿದೆ ?

ಈ) ಸಂಗ್ರಹಿಸಲು ಪ್ರತ್ಯೇಕ ಹಣ ಮಂಜೂರಾತಿ ಮಾಡಲಾಗಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ರಾಜ್ಯದ ಬರಪೀಡಿತ ಪ್ರದೇಶಕ್ಕಾಗಿ ಹೊಸನಗರ ತಾಲ್ಲೂಕಿನಲ್ಲಿ ಒಟ್ಟು ೯೨ ಮೆಟ್ರಿಕ್ ಟನ್‌ಗಳಷ್ಟು ಮೇವನ್ನು ಸಂಗ್ರಹಿಸಲಾಗಿತ್ತು.

ಆ) ಮೇವಿನ ಸಂಗ್ರಹಣೆಗಾಗಿ ಒಟ್ಟು ರೂ. ೧೭,೦೬೮-೫೦ ವೆಚ್ಚ ಮಾಡಲಾಗಿದೆ.

ಇ) ಶೇಖರಿಸಿದ ಮೇವಲ್ಲಿ ಕೋಲಾರ ಜಿಲ್ಲೆಗೆ ೨೬ ಮೆಟ್ರಿಕ್ ಟನ್ ಹಾಗೂ ಪಾವಗಡದ ರಾಮಕೃಷ್ಣಾಶ್ರಮಕ್ಕೆ ೯ ಮೆಟ್ರಿಕ್ ಟನ್ ಕಳುಹಿಸಲಾಗಿದೆ.

ಈ) ಶಿವಮೊಗ್ಗ ಜಿಲ್ಲೆಗೆ ೧-೪-೧೯೮೬ರಿಂದ ೩೦-೬-೧೯೮೬ರ ವರೆವಿಗೆ, ಮೇವು ಸಂಗ್ರಹಣೆ ಗಾಗಿ ೧೪.೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ ೧೩,೦೬೮-೩೧ ರೂಪಾಯಿಗಳನ್ನು ಹೊಸನಗರ ತಾಲ್ಲೂಕಿನಲ್ಲಿ ಮೇವು ಕಟಾವು ಮತ್ತು ಸಾಗಾಣಿಕೆಗೆ ಖರ್ಚು ಆಗಿದೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಹೊಸನಗರ ತಾಲ್ಲೂಕಿನಲ್ಲಿ ಮೇವು ಸಂಗ್ರಹಿಸುವ ವಿವರವನ್ನು ಹೇಳಿದ್ದಾರೆ. ಆದರೆ ಯಾರು ಯಾರಿಂದ ಎಷ್ಟೆಷ್ಟು ಮೇವನ್ನು ಸಂಗ್ರಹಿಸಲಾಯಿತು. ರೈತರಿಂದ ಎಷ್ಟು ಹುಲ್ಲು ಬಂತು, ಕಾಡಿನಿಂದ ಎಷ್ಟು ಹುಲ್ಲು ಬಂತು, ಅರಣ್ಯ ಇಲಾಖೆಯಿಂದ ಎಷ್ಟು ಮೇವು ಬಂತು, ತೋಟಗಾರಿಕೆ ಇಲಾಖೆಯಿಂದ ಎಷ್ಟು ಮೇವು ಬಂತು ಎಂದು ಕೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ರೆವಿನ್ಯೂ ಇಲಾಖೆಯಿಂದ ಹುಲ್ಲನ್ನು ಕೊಂಡಿದ್ದು ೪೮ ಮೆಟ್ರಿಕ್‌ಟನ್, ಉಚಿತವಾಗಿ ರೈತರಿಂದ ಪಡೆದದ್ದು ೬೪೭ ಮೆಟ್ರಿಕ್‌ಟನ್, ಅರಣ್ಯ ಇಲಾಖೆಯಿಂದ ಪಡೆದ ಹುಲ್ಲು ೨೫೫ ಮೆಟ್ರಿಕ್ ಟನ್, ಅರಣ್ಯ ಇಲಾಖೆಯವರು ಬೆಳೆಸಿದ ಆಫ್ರಿಕನ್ ಜೋಳ ೫೫ ಮೆಟ್ರಿಕ್ ಟನ್, ತೋಟಗಾರಿಕೆ ಇಲಾಖೆಯವರು ಬೆಳೆಸಿದ ಆಫ್ರಿಕನ್ ಜೋಳದ ಹುಲ್ಲು ೫೫ ಮೆಟ್ರಿಕ್ ಟನ್.

ಶ್ರೀ ಬಿ. ಸ್ವಾಮಿರಾವ್.—ಆಮೇಲೆ ಕೋಲಾರಕ್ಕೆ ಕಳುಹಿಸಿದ್ದು ೨೬ ಮೆಟ್ರಿಕ್‌ಟನ್ ಹುಲ್ಲು ಎಂದು ಹೇಳಿದರು. ಪಾವಗಡದ ರಾಮಕೃಷ್ಣಾಶ್ರಮಕ್ಕೆ ೯ ಮೆಟ್ರಿಕ್‌ಟನ್ ಹುಲ್ಲು ಕಳುಹಿಸಲಾಗಿದೆ ಎಂದು ಹೇಳಿದರು. ಇದನ್ನು ಯಾವಾಗ ಕಳುಹಿಸಲಾಯಿತು ಎಂದು ಹೇಳುವುದಕ್ಕೆ ಆಗುತ್ತದೆಯೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ೧-೪-೮೬ ರಿಂದ ೩೦-೬-೮೬ರ ವರೆಗಿನ ಅವಧಿ ಯಲ್ಲಿ ಕಳುಹಿಸಿದ್ದೇವೆ. ಈ ಪೀರಿಯಡ್‌ನಲ್ಲಿ ಕಳುಹಿಸಿದ್ದೇವೆ ಆದರೆ ಡೇಟ್ಸ್ ನನ್ನ ಹತ್ತಿರ ಇಲ್ಲ.

ಶ್ರೀ ಬಿ.ಸ್ವಾಮಿರಾವ್.—ಕೋಲಾರಕ್ಕೆ ಕಳುಹಿಸಿದ ತಾರೀಖಿನ್ನು ಬಿಟ್ಟರೆ ಈ ರಾಮಕೃಷ್ಣಾಶ್ರಮಕ್ಕೆ ಕಳುಹಿಸಲಾಗಿರುವ ೯ ಮೆಟ್ರಿಕ್‌ಟನ್ ಹುಲ್ಲನ್ನು ನಾನು ಎಲ್.ಎ. ಕೊಶ್ಚನ್ ಪಾಕಿದ ಮೇಲೆ, ಲಾರಿಯ ಮೂಲಕ ಕಳುಹಿಸಿದ್ದಾರೆ. ಲಾರಿ ನಂಬರ್ ಸಿ.ಎ.ಎ. ೪೯೮೫ ರಲ್ಲಿ, ೯ ಮೆಟ್ರಿಕ್ ಟನ್ ಹುಲ್ಲನ್ನು ಹಾಕಿ ಕಳುಹಿಸಿ, ತಮಗೆ ತಪ್ಪು ಮಾಹಿತಿ, ಸುಳ್ಳು ಮಾಹಿತಿ ಕೊಟ್ಟು ಕಳುಹಿಸಿ, ತಮಗೆ ಹಾಗೂ ಸರಕಾರಕ್ಕೆ ವಂಚನೆ ಮಾಡಿದ್ದಾರೆ. ಇದನ್ನು ತನಿಖೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಈಗ ಉಳಿದಿರತಕ್ಕಂಥ ಹುಲ್ಲಿನ ಗತಿ ಏನಾಗಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದೆಲ್ಲಾ ಡೀಟೇಲ್ಸ್ ಕೊಡಿ. ರಾಮಕೃಷ್ಣಾಶ್ರಮಕ್ಕೆ ಹುಲ್ಲನ್ನು ಕಳುಹಿಸಿದ್ದಾರೆ. ಆಮೇಲೆ ಕಳುಹಿಸಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ. ಒಟ್ಟಿನಲ್ಲಿ ಕಳುಹಿಸಿದ್ದು ನಿಜ. ಈಗ ಸಂಗ್ರಹ ಮಾಡಿರುವ ಹುಲ್ಲು ನಮಗೆ ಪುನಃ ಬೇಕಾಗಿದೆ. ಹುಲ್ಲನ್ನು ಸಂಗ್ರಹ ಮಾಡಿ ಇಡಲಿಕ್ಕೆ ಹೇಳಿದ್ದೇವೆ. ಮುಳೆ ಬಾರದೇ ಇರತಕ್ಕ ಪ್ರದೇಶಕ್ಕೆ ಅದನ್ನು ಕಳುಹಿಸುವ ಅವಶ್ಯಕತೆ ಇದೆ. ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಸಂಗ್ರಹ ಮಾಡಿರತಕ್ಕ ಹುಲ್ಲನ್ನು ಸರಿಯಾದ ರೀತಿಯಿಂದ ಕೂಡಿಡದೇ ಅದೆಲ್ಲಾ ಕೊಳೆತು ಗೊಬ್ಬರವಾಗಿದೆ. ಇದರ ಬಗ್ಗೆ ನಾನು ಹಲವಾರು ಸಲ ಪತ್ರಿಕಾ ಪೇಳಿಕೆ ಕೊಟ್ಟಿದ್ದೇನೆ. ಸಂಬಂಧಪಟ್ಟವರಿಗೆ ಬರೆದಿದ್ದೇನೆ, ಹುಲ್ಲೆಲ್ಲಾ ಪೂರ್ತಿ ಕೊಳೆತು ನಾಶವಾಗಿ ಹೋಗಿದೆ. ಗೊಬ್ಬರಕ್ಕೂ ಕೂಡಾ ಅದನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ಇದನ್ನು ಯಾರ ತಲೆ ಮೇಲೆ ಹಾಕಬೇಕು ? ಏನು ಅಲ್ಲಿನ ತಹಸೀಲ್ದಾರ್ ತಲೆಯ ಮೇಲೆ ಹಾಕಬೇಕೆ ? ಇದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ, ತಾವು ಕೂಡಾ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ ಎಂದು ಕೇಳಿ ನನಗೆ ಸಂತೋಷ ಆಯಿತು. ಅದಕ್ಕಾಗಿ ಅಲ್ಲಿರತಕ್ಕಂಥ ಹುಲ್ಲಿನ ಪರಿಸ್ಥಿತಿ ಏನಾಗಿದೆ ಅದನ್ನು ಉಪಯೋಗಿಸುವುದಕ್ಕೆ ಬರುತ್ತದೆಯೇ, ಬರುವುದಿಲ್ಲವೇ ಎಂಬುದನ್ನು ತಕ್ಷಣ ತಾವು ತನಿಖೆ ಮಾಡಿ ವರದಿ ತರಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದರ ಬಗ್ಗೆ ತನಿಖೆ ಮಾಡುತ್ತೇನೆ.

ಹೊನ್ನಾಳಿ ತಾಲ್ಲೂಕಿನಲ್ಲಿರುವ ಗ್ರಾಮಗಳನ್ನು ಬರಪೀಡಿತ ಗ್ರಾಮಗಳೆಂದು ಘೋಷಿಸುವುದು

೭೪ (೩೭೨) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—